# ನವಜಾತ ಶಿಶುವಿನಲ್ಲಿ ಬರಬಹುದಾದ ಅಪಾಯಗಳು

## ಅಪಾಯ ಚಿಹ್ನೆಗಳು

- ನವಜಾತ ಮಗುವಿನಲ್ಲಿ ಜೀವಕ್ಕೆ–ಅಪಾಯವಾಗುವಂತಹ ಅನೇಕ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.
- ಈ ಸಮಸ್ಯೆಗಳ ಸಂಕೇತಗಳನ್ನು ಕುಟುಂಬದವರು ಆರಂಭದಲ್ಲೇ ಕಂಡುಕೊಳ್ಳಬೇಕು ಮತ್ತು ಮಗುವನ್ನು ಸಮೀಪದ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು. ಈ ಸಂಕೇತಗಳು ಈ ಕೆಳಗಿನಂತಿವೆ:
  - ಮಗುವಿಗೆ ಹಾಲು ಹೀರುವುದಕ್ಕೆ ಆಗುವುದಿಲ್ಲ ಅಥವಾ ಅದರ ಹಾಲು ಹೀರುವಿಕೆ ತುಂಬಾ ದುರ್ಬಲವಾಗಿರುತ್ತದೆ.
  - ಮಗು ಅಳುವುದಿಲ್ಲ ಮತ್ತು/ಅಥವಾ ಮಗುವಿಗೆ ಉಸಿರಾಡಲು ಕಷ್ಟವಾಗುತ್ತದೆ.
  - ಮಗುವಿನ ಮೈ ತುಂಬಾ ತಣ್ಣಗಾಗಿದೆ ಅಥವಾ ತುಂಬಾ ಬಿಸಿಯಾಗಿದೆ.
  - ಮಗುವಿನ ಅಂಗೈ ಮತ್ತು ಅಂಗಾಲುಗಳಲ್ಲಿ ಹಳದಿ ಬಣ್ಣದ ಕಲೆಗಳು ಕಾಣಿಸಿಕೊಂಡಿವೆ.
  - ಮಗುವಿನ ಚಲನ–ವಲನ ಅಸಾಮಾನ್ಯವಾಗಿರುತ್ತದೆ (ನಡುಗುವುದು, ಮಲುಗುವುದು).
  - ಮಗು ಯಾವಾಗಲೂ ನಿದ್ದೆ ಗುಂಗಿನಲ್ಲಿರುತ್ತದೆ, ಹಾಲು ಉಣ್ಣದೇ ಅಥವಾ ಸತತವಾಗಿ ಅಳದೆಯೇ ದೀರ್ಘ ಸಮಯದ ವರೆಗೆ ನಿದ್ರೆ ಮಾಡಿಕೊಂಡಿರುತ್ತದೆ.
  - ಮಗುವಿನ ಶರೀರದಲ್ಲಿ ಬೊಕ್ಕೆ ಎದ್ದಿವೆ ಅಥವಾ ಹೊಕ್ಕಳು ಬಳ್ಳಿ ಕೆಂಪಾಗಿರುತ್ತದೆ ಅಥವಾ ಹೊಕ್ಕಳು ಬಳ್ಳಿಯಿಂದ ರಕ್ತ ಬರುತ್ತದೆ.




ಆರೋಗ್ಯ ಸೇವೆಗಳು ನಿಮ್ಮ ಗ್ರಾಮದಲ್ಲಿ ಮತ್ತು ನಿಮ್ಮ ಸಮೀಪದಲ್ಲಿ ಲಭ್ಯವಿರುತ್ತದೆ. ಇದರಿಂದಾಗಿ ದೈನಂದಿನ ತಪಾಸಣೆ ಮತ್ತು ತುರ್ತು ಅಗತ್ಯ ಸೇವೆಗಳನ್ನು ಪಡೆದುಕೊಳ್ಳಬಹುದಾಗಿದೆ

### ನಿಮ್ಮ ಮಗುವಿಗೆ ಯಾವುದೇ ಅಗತ್ಯತೆ ಉಂಟಾದಲ್ಲಿ ಸಂಪರ್ಕಿಸಬೇಕಾದ ವಿವರಗಳು

• • •

- ನಿಮ್ಮ ಸಮೀಪದಲ್ಲಿರುವ ಯಾವುದೇ ಆರೋಗ್ಯ–ಕೇಂದ್ರವನ್ನು ಗುರುತಿಸಬೇಕು.
- ನಿಮ್ಮ ಮಗುವಿಗೆ ಖಾಯಿಲೆ ಬಂದಾಗ ನೀವು ಆಸ್ಪತ್ರೆಗೆ ಹೋಗಬೇಕಾಗುತ್ತದೆ ಅಥವಾ ಯಾರಾದರೂ ಆರೋಗ್ಯ ಕಾರ್ಯಕರ್ತರನ್ನು ಸಂಪರ್ಕಿಸಬೇಕು.
- ಗ್ರಾಮೀಣ ಮಟ್ಟದಲ್ಲಿ ಮಾನ್ಯತೆ ಪಡೆದಿರುವ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ (ಆಶಾ)/ಅಂಗನವಾಡಿ ಕಾರ್ಯಕರ್ತೆ ಇರುತ್ತಾರೆ.
- ತಾಯಿ ಹಾಲು ಉಣಿಸುವ ಸಂದರ್ಭದಲ್ಲಿ ಮತ್ತು ಮಗುವಿನ ಆರೈಕೆ ನೀಡುವುದಕ್ಕಾಗಿ ಮಾರ್ಗದರ್ಶನ ನೀಡಲು, ಮಗುವಿಗೆ ಅಥವಾ ತಾಯಿಗೆ ಖಾಯಿಲೆ ಬಂದಾಗ ಆರೈಕೆ ಮತ್ತು ಸಹಾಯ ನೀಡಲು ಮಾನ್ಯತೆ ಪಡೆದಿರುವ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ (ಆಶಾ)/ಅಂಗನವಾಡಿ ಕಾರ್ಯಕರ್ತೆ ಇರುತ್ತಾರೆ.
- ರೋಗ ನಿರೋಧಕ ಲಸಿಕೆಗಳು, ಬೆಳವಣಿಗೆಯ ಪರಾಮರ್ಶೆ ಮತ್ತು ಪೌಷ್ಠಿಕಾಂಶ ಸೇವೆ ಮುಂತಾದ ಅನೇಕ ಆರೋಗ್ಯ ಸೇವೆಗಳು ಇಂದು ಗ್ರಾಮೀಣ ಮಟ್ಟದಲ್ಲಿ ಮಕ್ಕಳಿಗೆ ಉಚಿತವಾಗಿ ಲಭ್ಯವಿದೆ.

## ಸೋಂಕುಗಳನ್ನು ತಡೆಗಟ್ಟುವುದಕ್ಕಾಗಿ ಸಾಮಾನ್ಯ ಶುಚಿತ್ವ ಕ್ರಮಗಳು



- ಕೆಲವೊಂದು ಸರಳವಾದ ಶುಚಿತ್ವ ಕ್ರಮಗಳ ಮೂಲಕ ಅನೇಕ ಸೋಂಕುಗಳು ಮತ್ತು ಖಾಯಿಲೆಗಳನ್ನು ತಡೆಗಟ್ಟಬಹುದಾಗಿದೆ. ಸ್ವಚ್ಛ ಕೈಗಳು, ಸ್ವಚ್ಛ ಹಾಸಿಗೆ, ಸ್ವಚ್ಛ ಕೋಣೆ, ಸ್ವಚ್ಛ ಗಾಳಿ, ಸ್ವಚ್ಛ ನೀರು, ಸ್ವಚ್ಛ ಶೌಚಾಲಯ, ಸ್ವಚ್ಛ ಪರಿಸರಗಳಿಂದಾಗಿ ತಾಯಿ ಮತ್ತು ಮಗುವಿಗೆ ಬರಬಹುದಾದ ಅನೇಕ ಸೋಂಕುಗಳನ್ನು ತಡೆಗಟ್ಟಬಹುದಾಗಿದೆ.
- ಅತಿಸಾರ ಮೊದಲಾದ ಸೋಂಕುಗಳು ಬಾರದಂತೆ ತಡೆಗಟ್ಟುವುದಕ್ಕಾಗಿ ಸಾಬೂನಿನಿಂದ ಕೈ ತೊಳೆಯುವುದು ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ.
- ಹಾಲುಣಿಸುವುದಕ್ಕೆ, ಆಹಾರ ತಯಾರಿಸುವುದಕ್ಕೆ, ತಿನ್ನುವುದಕ್ಕೆ ಮುಂಚೆ ಹಾಗೂ ಮಗುವಿನ ಮಲ/ಮೂತ್ರಗಳನ್ನು ಸ್ವಚ್ಛ ಮಾಡಿದ ಬಳಿಕ, ನ್ಯಾಪ್ಕಿನ್‌ಗಳನ್ನು ಬದಲಾಯಿಸಿದ ಬಳಿಕ, ಶೌಚಾಲಯವನ್ನು ಉಪಯೋಗಿಸಿದ ಬಳಿಕ ಹಾಗೂ ನಿಮಗೆ ಅಗತ್ಯವೆಂದು ಕಂಡು ಬಂದಾಗಲೆಲ್ಲಾ ಕೈಗಳನ್ನು ತೊಳೆಯಬೇಕು.
- ಮಗುವಿನ ಕೋಣೆಯನ್ನು ಸ್ವಚ್ಛವಾಗಿ ಇರಿಸಬೇಕು. ನಿಮಗಾಗಿ ಮತ್ತು ಮಗುವಿಗಾಗಿ ಸ್ವಚ್ಛವಾದ ಬಟ್ಟೆಗಳು, ಸ್ವಚ್ಛ ಬ್ಲಾಂಕೆಟ್‌ಗಳು/ಶೀಟ್‌ಗಳನ್ನು ಉಪಯೋಗಿಸಬೇಕು.
- ನಿಮ್ಮ ಉಗುರುಗಳನ್ನು ಸ್ವಚ್ಛವಾಗಿರಿಸಬೇಕು ಮತ್ತು ಆಗಾಗ ತೆಗೆಯುತ್ತಿರಬೇಕು.
- ಕುಟುಂಬದ ಎಲ್ಲಾ ಸದಸ್ಯರೂ ಸ್ವಚ್ಛತೆ ಕ್ರಮಗಳನ್ನು ಅನುಸರಿಸಬೇಕು.



**ಜನನ ವೇಳೆಯಲ್ಲಿ ಕಡಿಮೆ ತೂಕವನ್ನು ಹೊಂದಿರುವ ಮಗುಗಳಿಗೆ ಸರಿಯಾದ ಆರೈಕೆ ನೀಡದಿದ್ದಲ್ಲಿ, ಅವುಗಳಿಗೆ ಬೇಗನೆ ಖಾಯಿಲೆಗಳು ಬರುತ್ತವೆ ಮತ್ತು ದುರ್ಬಲವಾಗಿ ಬೆಳೆಯಬಹುದು. ಅವುಗಳಿಗೆ ಮೊಲೆಹಾಲು ಕುಡಿಯಲು ತೊಂದರೆಯಾಗಬಹುದು. ಇಂತಹ ಸಂದರ್ಭದಲ್ಲಿ ಒತ್ತಿ ತೆಗೆದ ಹಾಲನ್ನು ಚಮಚ ಮೂಲಕ ಕುಡಿಸಬಹುದಾಗಿದೆ.**

### ಅಂಗನವಾಡಿ ಕಾರ್ಯಕರ್ತೆ ಇವುಗಳನ್ನು ಖಚಿತಪಡಿಸಬೇಕು

- ಒಂದು ವೇಳೆ ಯಾವುದೇ ಅಪಾಯದ ಸಂಕೇತ ಕಂಡು ಬಂದಲ್ಲಿ, ಮಗುವನ್ನು ತಕ್ಷಣವೇ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು.
- ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ, ಮಗುವನ್ನು ಚೆನ್ನಾಗಿ ಮುಚ್ಚಿರಬೇಕು, ಬೆಚ್ಚಗಿರಿಸಬೇಕು ಮತ್ತು ಸಂಚಾರದಲ್ಲಿರುವಾಗಲೂ ಮಗುವಿಗೆ ಹಾಲುಣಿಸಬೇಕು.
- ಖಾಯಿಲೆ ಹೊಂದಿರುವ ಮತ್ತು ಹರಡಬಹುದಾದ ಸೋಕುಗಳನ್ನು ಹೊಂದಿರುವ ಜನರಿಂದ ಮಗುವನ್ನು ದೂರದಲ್ಲಿರಿಸಬೇಕು.
- ಸಮೀಪದಲ್ಲಿರುವ ಆರೋಗ್ಯ ಉಪ–ಕೇಂದ್ರ ಮತ್ತು ಆಸ್ಪತ್ರೆ ಕುರಿತಂತೆ ಕುಟುಂಬದವರಿಗೆ ಮಾಹಿತಿ ಇರಬೇಕು.
- ನವಜಾತ ಶಿಶುವಿಗೆ ಮತ್ತು ತಾಯಿಗೆ ಲಭ್ಯವಿರುವ ಹಲವಾರು ಸರಕಾರಿ ಸೇವೆಗಳ ಕುರಿತು ಕುಟುಂಬದವರಿಗೆ ತಿಳುವಳಿಕೆ ನೀಡುವುದು.